6. ಅಧ್ಯಕ್ಷರ ಸೂಚನೆ

(ಗೊಂದಲ)

ವಿಷಯ :- ಶೂನ್ಯ ವೇಳೆಯ ವ್ಯಾಪ್ತಿಯ ವಿಸ್ತರಣೆ

ಅಧ್ಯಕ್ಷರು:- ಯಾರ್ಯಾರಿಗೆ ಯಾವುದುಪ್ರೀತಿ ಪದಾರ್ಥವೋ ಅದರಲ್ಲಿ ಅವಕಾಶ ಮಾಡಿ ಕೊಡುತ್ತೇನೆ. ನಾನೇನು ಮಾಡಲಿ? ಮಾನ್ಯ ನಾಣಯ್ಯನವರು ಆಗಲೇ ಒಂದು ಮಾಡತನ್ನು ಹೇಳಿದಿರೆ. ಇನ್ನು ಜೀರೋ ಅವರ್ ನಡೆಯುತ್ತಿದೆಯೇ? ನಾವು 351ನ್ನುಕ್ಕೆ ಬಿಟ್ಟಿದ್ದೇವೆ. ಮೊದಲಿಗೆ 312 ಇತ್ತು. 312 ಮ್ಯಾಟರ್ ಆಫ್ ಪಬ್ಲಿಕ್ ಇಂಪಾರ್ಟಿನ್ಸ್ ಏನಿತ್ತು, ಅದನ್ನು ಈಗ ನಾವು ರೂಲ್ಸ್‌ನಲ್ಲಿ ಇಟ್ಟುಕೊಂಡಿಲ್ಲ. ಕಾಲಿಂಗ್ ಅಟೆನ್‌ಷನ್ಸ್ ಒಂದುದಿವಸಕ್ಕೆ ಎರಡಕ್ಕಿಂತ ಹೆಚ್ಚು ತೆಗೆದುಕೊಳ್ಳುವುದು ಆಗುತ್ತಾ ಇಲ್ಲ. For members who want to raise certain matters relating to their constituencyor urgent public importance matters. There is no way. Daily I cannot entertain adjournment motions also. Infact, I must be thankful to them because several times when they give notice of adjournment motion, I am not even permitting them to make preliminary submission. I just take shelter under this zero hour, the scope of which also I know personally very well. I only try to satisfy the members. This is a kind of arrangement between the members and the Chair. Therefore, I am submitting to you that it is with this intention I am trying to expand the scope of the zero hour to facilitate there rquirement of the Hon.Members

Sri.M.C. Nanaiah:- On behalf of the government, We have no objection. They have got certain issues to be raised on the floor of the House and they are legitimately entitled to it. But, let the government be given a day's time. Sometimes what happens we may not be in a position to give proper answers.

Mr. Speaker:- No problem

Sri. M.C. Nanaiah:- When they give hour notice today, let it be slated for tomorror so that we can come with answer tomorrow. When they give notice for tomorrow, let that be slated day-after-tomorrow

Mr. Speaker:- I take your views into consideration. I shall use my discretion. Wherever I feel a day's notice is required I shall grant that. Oterwise, government can always stand up and ask for the time which

I will be able to concede. There is no problem. I am prepared to cooperate. My only intention is to see that as many members are given an opportunity to air their views in this forum.

7) ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು:- ಮಾನ್ಯ ವಿರೂಪಾಕ್ಷಪ್ಪನವರೇ, ತಾವು ನಿನ್ನೆ ನನ್ನ ಕಛೇರಿಗೆ ಬಂದಿದ್ದಿರಿ. ಮಾತನಾಡುವ ವೇಳೆಗೆ ನಿಮ್ಮದು ಎರಡು ವಿಷಯಗಳನ್ನು ಕೊಟ್ಟಿದ್ದೇನೆಂದು ಹೇಳಿ ನಿಮ್ಮ ಧ್ವನಿಸ್ವಲ್ಪ ಜೋರಾಗಿತ್ತು. ಸಭಾಧ್ಯಕ್ಷರು ಆಗಬಹುದು. ನನ್ನೊಟ್ಟಿಗೆ ಮಾಡನಾಡುವಾಗ ನಾನು ಎಲ್ಲಾ ಸದಸ್ಯರ ಬೇಡಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅವಕಾಶ ಮಾಡಿಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ. ಧ್ವನಿ ಏರಿಸಿ ಮಾಡನಾಡತಕ್ಕದ್ದು ಸಾಧುವಲ್ಲ. ಅದನ್ನು ಮಾಡಬಾರದು.

ಶ್ರೀ ಕೆ. ವಿರೂಪಾಕ್ಷ:- ಆ ರೀತಿ ಆಗಿದ್ದರೆ ಕ್ಷಮಿಸಿ ಸಾರ್. ನಾನು ಹತ್ತನೇ ತಾರೀಖು ಕೊಟ್ಟಿದ್ದೆ ಎಂದು ಹೇಳಿದೆ.

ಅಧ್ಯಕ್ಷರು:- ಆಯಿತು, ಏನು ಮಾಡುವುದಕ್ಕೆ ಆಗುತ್ತದೆ. ಹತ್ತಕ್ಕೆ ಕೊಟ್ಟಿದ್ದಾರೆ, ಎಂಟಕ್ಕೆ ಕೊಟ್ಟಿದ್ದಾರೆ. ಎಲ್ಲಾ ಮೆಂಬರ್ಸ್ ಕೊಟ್ಟಿದ್ದಾರೆ. ಎಲ್ಲಾ ಪಾರ್ಟಿಯವರು ಕೊಡುತ್ತಾರೆ. ಸದನ ಇರುವ ವೇಳೆಗೆ ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ. ನಾನು ಪಕ್ಷ ನೋಡುವುದಿಲ್ಲ. ನಿಮ್ಮ ಹಿನ್ನೆಲೆ ನೋಡುವುದಿಲ್ಲ. ಪ್ರತಿ ಒಬ್ಬರಿಗೂ ನಾನೇ ಕರೆದು ಕರೆದು ಅವಕಾಶವನ್ನು ಮಾಡಿಕೊಡುತ್ತೇನೆ. ಹೇಳಿ, ಮೊನ್ನೆ ನಿಮ್ಮದು ಒಂದು ನೋಟೀಸ್ ಇತ್ತು. ಲ್ಯಾಪ್ಸ್ ಆಯಿತು. ನಾನು ಏನು ಮಾಡಲಿಕ್ಕೆ ಆಯಿತು? ದಯಮಾಡಿ ಪ್ರಸ್ತಾಪ ಮಾಡಿ.

ಶ್ರೀ ಕೆ. ವಿರೂಪಾಕ್ಷಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ತುಂಗಭದ್ರಾ ಎಡದಂಡೆ ಕಾಲುವೆ ರಾಯಚೂರು ಜಿಲ್ಲೆಯ ರೈತರಿಗೆ ಒಂದು ವರದಾನವಾಗಿದೆ ಎಂದುಹೇಳಿ ನಾವು ಭಾವಿಸಿದ್ದೇವೆ.

ಅಧ್ಯಕ್ಷರು:- ತಾವು ಗಮನವನ್ನು ಸೆಳೆದು ಬಿಡಿ.

ಶ್ರೀ ಕೆ. ವಿರೂಪಾಕ್ಷಪ್ಪ:- ನಾನು ನೀರಾವರಿ ಸಚಿವರು ಗಮನನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:- ತಾವುಹೇಗೆ ಹೇಳಿ. ತಾವು ವಿಚಾರವನ್ನು ಓದಿ ಬಿಟ್ಟು, ಈ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದು ಬಯಸುತ್ತಿದ್ದೇವೆ ಎಂದುಹೇಳಿ. ಅವರು ಉತ್ತರ ಓದುತ್ತಾರೆ. ಅವರು ಉತ್ತರವನ್ನು ಓದಿದ ನಂತರ ತಾವು ಸೃಷ್ಟೀಕರಣ ಕೇಳಿ.

ವಿಷಯ :- ತುಂಗಭದ್ರಾ ಎಡದಂಡೆ ನಾಲೆ ಒಡೆದು ಹೋಗಿರುವುದರಿಂದ ಬೆಳೆ ಹಾನಿಯಾಗಿರುವ ಬಗ್ಗೆ

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು):- ಮಾನ್ಯ ಅಧ್ಯಕ್ಷರೆ, , 'ತುಂಗಭದ್ರ' ಎಡದಂಡೆ ನಾಲೆಯು ಒಡೆದು ಹೋಗಿರುವುದರಿಂದ ಕಡಲೆ ಮತ್ತಿತರ ಬೆಳೆಗಳಿಗೆ ಹಾನಿಯಾಗಿ ಮುಖ್ಯಮಂತ್ರಿಯವರು ರೈತರ ಬೆಳೆಗಳಿಗೆ ನೀರು ಬಿಡುವ ಭರವಸೆ ನೀಡಿದ್ದರೂ ಇದುವರೆಗೂ ನೀರು ಬಿಡದಿರುವ ಬಗ್ಗೆ ಮಾನ್ಯ ಭಾರೀ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.